'ಜ್ಯೂನಿಯರ್ಸ್ ಎಲ್ಲಾ ಬನ್ರೋ' ಎಂಬ ಅರಿಹಂತನ ಆ ಗಟ್ಟಿ ಸ್ವರ ಕಿವಿಗೆ ಅಪ್ಪಳಿಸಿದ್ದು. 'ಯಾರ್ ಅಪ್ಪೀ ಕೂಗಿದ್ದು?' ಎಂಬ ಅಮ್ಮನ ಪ್ರಶ್ನೆಗೆ ಉತ್ತರಿಸುವ ಮುನ್ನವೇ ಅವನ ಪಕ್ಕದ ಕೋಣೆಯ, ಪಿಯುಸಿ ಸಮಯದಲ್ಲೂ ಹಾಸ್ಟೆಲ್ಲಿನಲ್ಲಿ ಇದ್ದು ಅಭ್ಯಾಸವಿದ್ದ ವಿನಯ 'ಬಂದ್ವಿ ಅಣ್ಣಾ' ಎನ್ನುತ್ತಾ ಗಾಬರಿಯಲ್ಲಿ ಕೆಳಗೆ ಓಡುತ್ತಿದ್ದುದನ್ನು ನೋಡಿ ಇದೇನೋ ಘನಗಂಭೀರ ಸನ್ನಿವೇಶವೇ ಇರಬೇಕೆಂದು ಕರೆಯನ್ನು ಅರ್ಧಕ್ಕೇ ಮೊಟಕುಗೊಳಿಸಿ ಸಂದೀಪ ಕೆಳಗೆ ಧಾವಿಸಿದ.

ಅಡುಗೆಮನೆಗೆ ಅಂಟಿಕೊಂಡಂತೆ ಅರಿಹಂತನ ಕೋಣೆ ಇತ್ತು. ಹಾಸ್ಟೆಲ್ಲಿನಲ್ಲಿದ್ದ ಅಷ್ಟೂ ಐವತ್ತು ಚಿಲ್ಲರೆ ಹುಡುಗರು ಬಂದು ನಿಂತರೂ ಜಾಗ ಮಿಕ್ಕುವಷ್ಟು ದೊಡ್ಡ ಕೋಣೆ. ಅವನಿಗೆ ಯಾರೂ ರೂಂಮೇಟುಗಳು ಇರಲಿಲ್ಲ, ಅಥವಾ ಅವನು ಯಾರನ್ನೂ ಬಿಟ್ಟುಕೊಂಡಿರಲಿಲ್ಲ. ಡೈನಿಂಗ್ ಹಾಲಿನಲ್ಲಿ ಇಡಬೇಕಾಗಿದ್ದ ಟೀವಿಯನ್ನು ತನ್ನ ಕೋಣೆಯಲ್ಲಿ ತಂದಿಟ್ಟುಕೊಂಡಿದ್ದ. ಇಡೀ ಹಾಸ್ಟೆಲ್ಲಿನ ಮೇಲೆ ಅವನಿಗಿರುವ ಹಿಡಿತ ಎಂಥದ್ದೆಂಬುದನ್ನು ಆ ಕೋಣೆಯ ಘನತೆ ನೋಡಿ ಅಳೆಯಬಹುದಿತ್ತು. ಸಂದೀಪನೂ ಸೇರಿದಂತೆ ಉಳಿದ ಹದಿನೈದು ಜನ ಜ್ಯೂನಿಯರುಗಳು ಅಲ್ಲಿಗೆ ಹೋಗುವಷ್ಟರಲ್ಲಿ ಸೀನಿಯರುಗಳು ವೃತ್ತಾಕಾರವಾಗಿ ಚೇರುಗಳನ್ನು ಹಾಕಿ ಕುಳಿತುಕೊಂಡು ಮಧ್ಯದ ಜಾಗವನ್ನು ಖಾಲಿ ಬಿಟ್ಟಿದ್ದರು. ಜ್ಯೂನಿಯರುಗಳೆಲ್ಲಾ ಅಲ್ಲಿಗೇ ಹೋಗಿ ನಿಲ್ಲಬೇಕು ಎಂಬುದನ್ನು ಆ ಸನ್ನಿವೇಶದಲ್ಲಿ ಯಾರೂ ವಿವರಿಸುವ ಅಗತ್ಯವಿರಲಿಲ್ಲ. ಅಲ್ಲಿ ರ್‍ಯಾಗಿಂಗ್ ಶುರುವಾಗಲಿದೆ ಎಂದು ಗೊತ್ತಾಗಿ ಸಂದೀಪನ ಮೈ ಒಮ್ಮೆ ಬೆವರಿತು. ಎರಡು ವಾರಗಳ ಕಾಲ ತನ್ನತ್ತ ಭ್ರಾತೃತ್ವದ ನಗು ಬೀರಿ ಬೆಚ್ಚನೆಯ ಭಾವ ನೀಡಿದ್ದ ಹಿರಿಯರೆಲ್ಲಾ ಮುಖ ಸಿಂಡರಿಸಿಕೊಂಡು ಹೋಂವರ್ಕ್ ಮಾಡದ ಮಕ್ಕಳಿಗೆ ಹೊಡೆಯಲು ತಯಾರಾಗಿರುವ ಅತ್ಯಂತ ಸಿಟ್ಟಿನ ಮಾಸ್ತರರ ತರಹ ಕುಳಿತಿರುವುದನ್ನು ನೋಡಿ ಸಂದೀಪನಿಗೆ ಇಡೀ ಜಗತ್ತಿನ ಬಗ್ಗೆ ಇದ್ದ ನಂಬಿಕೆ ಒಮ್ಮೆಗೇ ಪೂರ್ತಿ ಕ್ಷೀಣಿಸಿತು. ಪೊಲೀಸರ ಎದುರು ನಿಂತಿರುವ ಕಳ್ಳರಂತೆ ನಾವೆಲ್ಲಾ ಯಾಕೆ ತಲೆ ತಗ್ಗಿಸಿ ನಿಂತಿದ್ದೇವೆ, ಅದಾವ ಭಯ ನಮ್ಮ ಕುತ್ತಿಗೆಯನ್ನು ಹಿಡಿತಕ್ಕೆ ತೆಗೆದುಕೊಂಡಿದೆ ಎಂದು ಸಂದೀಪ ಯೋಚಿಸುವಷ್ಟರಲ್ಲಿ ಸೀನಿಯರುಗಳ



ಗುಂಪಿನ ಕಡೆಯಿಂದ 'ಹೈಟ್ ಪ್ರಕಾರ ನಿಂತ್ಕಳ್ರೋ, ಎಡಗಡೆಯಿಂದ ಬಲಗಡೆಗೆ' ಎಂಬ ಆದೇಶ ಬಂತು. ಇನ್ನೂ ತಮ್ಮ ತಮ್ಮ ವ್ಯಕ್ತಿತ್ವಗಳನ್ನು ಸರಿಯಾಗಿ ವಿನಿಮಯ ಮಾಡಿಕೊಂಡಿರದಿದ್ದ ಜ್ಯೂನಿಯರುಗಳು ಎತ್ತರದ ಆಧಾರದ ಮೇಲೆ ಪರಸ್ಪರರನ್ನು ಅಳೆಯುತ್ತಾ ಅಕ್ಕಪಕ್ಕ ನಿಂತುಕೊಳ್ಳುತ್ತಿದ್ದರೆ ಸೀನಿಯರುಗಳ ಗುಂಪಿನಿಂದ ಮುಸಿಮುಸಿ ನಗುವಿನ ಅಲೆ. ಎಡಗಡೆಯ ತುದಿಯಲ್ಲಿ ನಿಂತ ಸುಧಾಕರನತ್ತ ನೋಡಿ ಒಬ್ಬ ಸೀನಿಯರು 'ಏ ಕುಳ್ಳಾ, ಪಿಯುಸಿ ಆಗಿದ್ಯೇನೋ ನಿಂದು, ಬರ್ತ್ ಸರ್ಟಿಫಿಕೇಟ್ ತೋರ್ಸು, ನಿನ್ ಡೆಲಿವರಿ ಆದ್ ತಕ್ಷಣ ಸ್ಕೂಲಿಗ್ ಸೇರ್ಸಿದಾರೆ ಅನ್ಸುತ್ತೆ ನಿಮ್ಮಪ್ಪ' ಎಂದ. ತಕ್ಷಣ ನಗುವಿನ ಅಲೆ ಸುನಾಮಿಯಾಯಿತು. ಪರಿಸ್ಥಿತಿ ತಿಳಿಯಾಯಿತೇನೋ ಎಂದು ಭಾವಿಸಿ ಸುಧಾಕರನೂ ಕೆಕ್ಕೆಕ್ಕೇ ಎಂದು ನಕ್ಕ. ಇತರ ಜ್ಯೂನಿಯರುಗಳೂ ನಗೆಗೂಡಿಸಿದರು. ಇದ್ದಕ್ಕಿದ್ದಂತೆ ಎಲ್ಲರ ಮೈ ನಡುಗುವಂತೆ ಅರಿಹಂತ್, 'ಏ ಲೋಫರ್, ಏನೋ ನೆಗಾಡ್ತಾ ಇದ್ಯಾ? ಕೋತಿ ಕುಣೀತಿದ್ಯಾ ಇಲ್ಲಿ? ಸೀನಿಯರ್ಸ್ ಎದ್ರುಗಡೆ ಹೆಂಗಿರ್ಬೇಕು ಅಂತ